

ಕಣಕಣದಲ್ಲೂ ಬ್ಯೂಟಿ ಕ್ರೇಜ್ ಹೊತ್ತ ಹೆಣ್ಣುಮಕ್ಕಳ ಗೋಳು ಕೇಳೋ ಹಾಗಿರಲಿಲ್ಲ. ತಿಂಗಳಿಗೊಮ್ಮೆಯಾದ್ರೂ ಪಾರ್ಲರ್‌ಗೆ ಪಾದ ಬೆಳೆಸುತ್ತಿದ್ದ ಲಲನಾಮಣಿಯರು, ಮನೆಯಲ್ಲೇ ಲಾಕ್ ಆಗಿದ್ದು ತಮ್ಮ ಪೇಲವ ಮೊಗವನ್ನು ದರ್ಪಣಕ್ಕೆ ಒಡ್ಡಿಕೊಳ್ಳಲು ಹಿಂದೇಟು ಹಾಕುವಂತಾಯಿತು. ಕೊರೊನಾದ ಎಲ್ಲಾ ಸುರಕ್ಷತಾ ಕ್ರಮವನ್ನು ಪಾಲಿಸುತ್ತಿದ್ದೇವೆಂದು ಸಲೂನ್‌ಗಳು ತಮ್ಮ ಗ್ರಾಹಕರಿಗೆ ಎಡೆಬಿಡದೆ ಫೋನಾಯಿಸಿದ್ದೇ ತಡ – ಮಾಸ್ಕ್ ತೆಗೆದು ಬಿಂದಾಸಾಗಿ ಮುಖಮೂತಿ ಒಡ್ಡಿಕೊಂಡು, ತಿದ್ದಿ ತೀಡಿಸಿ, ಓರೆಕೋರೆಗಳನ್ನು ನೇರ್ಪು ಮಾಡಿಸಿಕೊಂಡರು.

ಇನ್ನು ನಮ್ಮ ಸಿನಿಮಾ ನಟ – ನಟಿಯರು, ಸಲೂನ್‌ಗಳಿಲ್ಲದಿದ್ದರೆ ತಮ್ಮ ಸಿನಿಮಾ ರಂಗಿನ ಛಾಪನ್ನೇ ಕಳೆದುಕೊಳ್ಳುವರು. ಕೆಲ ನಟಿಯರು ತಮ್ಮ ವೈಯಕ್ತಿಕ ಹೇರ್ ಡ್ರೆಸ್ಸರ್ ಹಾಗೂ ಮೇಕಪ್ ಆರ್ಟಿಸ್ಟ್‌ಗಳನ್ನು ತಾವೆಲ್ಲೇ ಹೋದರೂ ಜೊತೆಗೇ ಕರೆದೊಯ್ಯುತ್ತಾರೆ ವಿದೇಶಗಳಿಗೂ.

ಕೆಲವು ತಿಂಗಳ ಹಿಂದೆ ಭಾರತದ ಹೆಸರಾಂತ ಹೇರ್ ಸ್ಟೈಲಿಸ್ಟ್ ಜಾವೇದ್ ಹಬೀಬ್ ತನ್ನ ತರಬೇತಿ ಕಾರ್ಯಾಗಾರದಲ್ಲಿ, ನೀರಿಲ್ಲದ ಕಾರಣ ಒಬ್ಬ ಗ್ರಾಹಕಿಯ ತಲೆಯ ಮೇಲೆ ಉಗುಳಿ ಹೇರ್ ಕಟ್ ಮಾಡಲು ಮುಂದಾಗಿದ್ದು ವಿವಾದಕ್ಕೆ ಕಾರಣವಾಯಿತು. ಏನು ಹೆಸರು ಮಾಡಿದರೇನು, ದುರ್ವರ್ತನೆಯ ಪರಮಾವಧಿ ಮೀರಿದರೆ!

ಯಾವುದೇ ಬ್ರಾಂಡ್ ಸಲೂನ್ ಒಳಗಡಿಯಿಟ್ಟ ಕ್ಷಣ, ಯೂನಿಫಾರ್ಮ್ ತೊಟ್ಟು ಢಾಳಾಗಿ ತುಟಿಗೆ ಗಾಢ ವರ್ಣದ ರಂಗನ್ನು ಬಳಿದುಕೊಂಡ ಕನ್ಯಾಮಣಿಗಳು ಒನಪು ವಯ್ಯಾರದಿಂದ ನಮ್ಮನ್ನು ಬರಮಾಡಿಕೊಳ್ಳುತ್ತಾರೆ. ಎ.ಸಿ.ಯ ತಂಪಿನ ಜೊತೆ ತಂಪು ಪಾನೀಯವನ್ನೂ ಮುಂದಿಡುತ್ತಾರೆ. ಕೊನೆಯಲ್ಲಿ ನಾವು ತೆರುವ ಸಾವಿರಾರು ರೂಪಾಯಿ ಬಿಲ್‌ಗೆ ಹೌಹಾರದಿರಲೆಂದು ಇಪ್ಪತ್ತು ರೂಪಾಯಿಯ ತಂಪು ಪಾನೀಯವನ್ನು ಮೊದಲೇ ಕೊಟ್ಟು, ನಮ್ ತಲೀ ತಂಪು ಮಾಡೋದು ಅವರ ಹುನ್ನಾರವೇ?

ಸಣ್ಣಸಣ್ಣ ಪಾರ್ಲರ್‌ಗಳಿಗೆ ಹೋದರೆ, ಅದೇ ಸರ್ವೀಸ್‌ಗಳನ್ನು ಅರ್ಧಕ್ಕೂ ಕಡಿಮೆ ದರದಲ್ಲೇ ಪೂರೈಸಿಕೊಳ್ಳಬಹುದು. ಆದರೆ ಅಲ್ಲಿ ಯಾವ ಕಾಫಿ–ಟೀ, ಜ್ಯೂಸ್ ಸಿಗದು. ಇರಲಿ ಬಿಡಿ, ನಾವೇನು ಅಲ್ಲಿ ಕುಡೀಯೋಕೆ, ತಿನ್ನೋಕೆ ಹೋಗ್ತೀವಾ? ಹೋಟೇಲಿನ ಮಾಣಿಗಳು ಇಡ್ಲಿ, ವಡೆ, ಖಾರ ಪೊಂಗಲ್, ಕೇಸರಿಬಾತ್, ಸೆಟ್ ದೋಸಾ, ಪ್ಲೇನ್ ದೋಸಾ... ಎಕ್ಸ್‌ಟ್ರಾ ಮೆನುವನ್ನು ಪಟಪಟನೆ ಉದುರಿಸುವಂತೆ, ಇಲ್ಲಿನ ಸಿಬ್ಬಂದಿ ಫುಲ್ ಸ್ವಿಂಗ್‌ನಲ್ಲಿ ಸ್ವಾಗತಿಸುತ್ತಾ 'ಏನ್ ಸರ್ವೀಸ್ ಬೇಕಿತ್ತು ಮ್ಯಾಡಮ್' ಎಂದು ಕೇಳುತ್ತ, ಹೇರ್ ಕಟ್ ಬೇಕಿತ್ತು ಎಂದಾದರೆ ಅದಕ್ಕನುಗುಣವಾಗಿ ಫೆದರ್ ಕಟ್, ಸ್ಟೆಪ್ ಕಟ್, ಲೇಯರ್ಸ್, ಯೂ ಕಟ್ ಎಂದುಸುರುವರು. ವ್ಯಾಕ್ಸಿಂಗ್ ಕೇಳಿದರೆ – ಫ್ರೂಟ್ ವ್ಯಾಕ್ಸ್, ಚಾಕೋಲೇಟ್ ವ್ಯಾಕ್ಸ್, ಶುಗರ್ ವ್ಯಾಕ್ಸ್ ಎಂಬಿತ್ಯಾದಿಯ ದೊಡ್ಡ ಪಟ್ಟಿಯೇ ಮುಂದಿಡುತ್ತಾರೆ. ಯಾವುದೋ ಸಿಂಪಲ್ ವ್ಯಾಕ್ಸಿಂಗಿಗೆಂದು ಹೋದವರಿಗೆ, 'ಇದಕ್ಕಿಂತ ಮತ್ತೊಂದು ಮಾಡಿಸಿಕೊಳ್ಳಿ. ನಿಮ್ಮಸ್ಕಿನ್ ಮತ್ತಷ್ಟು ಸ್ಮೂತ್ ಆಗುತ್ತದೆಂದು ಆಮಿಷವೊಡ್ಡುತ್ತಾರೆ. ಇವರ ವಶೀಕರಣದಂತಹ ವಿವರಣೆಗೆ ಹಾಗೂ ಅವುಗಳ ಆಕರ್ಷಕ ಹೆಸರುಗಳಿಗೆ ಮಾರು ಹೋಗಿ ಕೊನೆಗೆ ಅವರು ಹೇಳಿದ್ದನ್ನೇ ಆಯ್ಕೆ ಮಾಡಿಕೊಳ್ಳುವುದುಂಟು. ಹರಕೆಯ ಕುರಿ ಆಗೋದು ಗ್ಯಾರಂಟಿ!

'ಹೆಚ್ಚಿನ ಡಿಟೇಲ್ಸ್‌ಗೆ ಇದರಲ್ಲಿ ನೋಡಿ, ನಿಮಗೆ ಯಾವುದು ಬೇಕೋ ಅದನ್ನು ಆಯ್ಕೆ ಮಾಡಿ' ಎಂದು ನಮ್ಮ ಕೈಗೊಂದು ದೊಡ್ಡ ಪುಸ್ತಕವಿಡುತ್ತಾರೆ. ಬಹುಶಃ ಶಾಲೆ ಕಾಲೇಜುಗಳಲ್ಲೂ ಅಷ್ಟು ದೊಡ್ಡ ಪುಸ್ತಕವನ್ನು ನಾವು ಹಿಡಿದಿರಲಿಲ್ಲವೇನೋ! ಆದರೆ ಈ ಪುಸ್ತಕದ ತುಂಬೆಲ್ಲಾ ಹಾಲಿವುಡ್ ನಟಿಯರೇ ರಾರಾಜಿಸಿರುತ್ತಾರೆ. ಈ ಬ್ಯೂಟೀಸ್ ಪಕ್ಕ ಬ್ಯೂಟಿ ಸರ್ವೀಸ್‌ಗಳಿಗೆ ಕೊಟ್ಟಿರುವ ದರಪಟ್ಟಿ ಜೊತೆ ಇಷ್ಟು ಪರ್ಸೆಂಟ್ ಎಂದು ತೆರಿಗೆ ಬೇರೆ. ಆ ಅಂಕಿಅಂಶಗಳನ್ನು ನೋಡಿದರೆ ಹೃದಯಸ್ತಂಭನವಾದರೂ ಆಶ್ಚರ್ಯವಿಲ್ಲ.